O.S.No.:222/2014
DW4

ಈ ದಿನ ದಿಃ07.01.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

**<u>ಪಾಟೀ ಸವಾಲುಃ- ವಾದಿ ಪರ ವಕೀಲರಾದ ಶ್ರೀ ಕೆ.ವೈ.ಎಸ್ ರವರಿಂದಃ-</u>**

1. ಈ ದಾವೆಯು ಸರ್ವೆ ನಂ.72/3ಕ್ಕೆ ಸಂಬಂಧಿಸಿದಂತೆ ನಡೆಯುತ್ತಿದೆ. ನನ್ನ ಜಮೀನು ಸರ್ವೆ ನಂ.78/6ಕ್ಕೂ ದಾವಾಸ್ವತ್ತಿಗೂ ಸುಮಾರು ಒಂದು ಕೀ.ಮಿ ಅಂತರವಿದೆ. ನನ್ನ ಜಮೀನಿಗೂ ದಾವಾಸ್ವತ್ತಿಗೂ ಸುಮಾರು 4 ಕೀ.ಮಿ ಅಂತರ ಇರುತ್ತದೆ ಎಂದರೆ ಸರಿಯಲ್ಲ. ದಾವಾಸ್ವತ್ತಿನ ಪೂರ್ವಕ್ಕೆ ನನ್ನ ಜಮೀನು ಬರುತ್ತದೆ. ದಾವಾಸ್ವತ್ತಿನ ಪಶ್ಚಿಮಕ್ಕೆ ನನ್ನ ಜಮೀನು ಬರುತ್ತದೆ ಎಂದರೆ ಸರಿ.

2. ವಾದಿ ನನಗೆ ಗೊತ್ತು. ವಾದಿಯ ಗಂಡನ ತಂದೆಯ ಹೆಸರು ನನಗೆ ಗೊತ್ತಿಲ್ಲ. ವಾದಿಯ ಗಂಡನ ಹೆಸರು ವೀರಭದ್ರಯ್ಯ. ವಾದಿಯ ಗಂಡನ ತಂದೆಯ ಹೆಸರು ಕಾಡ ಎಂದರೆ ನನಗೆ ಗೊತ್ತಿಲ್ಲ. ಕಾಡ ರವರಿಗೆ ಎಷ್ಟು ಜನ ಮಕ್ಕಳು ಇದ್ದರು ಎಂಬ ಬಗ್ಗೆ ನನಗೆ ಗೊತ್ತಿಲ್ಲ. ಕಾಡ ರವರ ಕುಟುಂಬಕ್ಕೆ ಸಂಬಂಧಿಸಿದಂತೆ ವಂಶವೃಕ್ಷವನ್ನು ನಾನು ನೋಡಿಲ್ಲ. ದಾವಾಸ್ವತ್ತು 1962ರಲ್ಲಿ ಕ್ರಯ ಆಗಿರುತ್ತದೆ. ಸದರಿ ಕ್ರಯಪತ್ರಕ್ಕೆ ನಾನು ಸಾಕ್ಷಿದಾರನಾಗಿ ಸಹಿ ಮಾಡಿಲ್ಲ. ಮೂಲ ಕ್ರಯಪತ್ರವನ್ನು ನಾನು ನೋಡಿಲ್ಲ. ಸದರಿ ಕ್ರಯಪತ್ರದಲ್ಲಿ ಬರೆದ ಚಕ್ಕುಬಂದಿ ನನಗೆ ಗೊತ್ತು. ಸದರಿ ಕ್ರಯಪತ್ರದ ಪ್ರಕಾರ ಅದರಲ್ಲಿ ನಮೂದಿಸಿದ ಜಮೀನಿನ

ಪೂರ್ವಕ್ಕೆ ಶಿವಣ್ಣ ಉಃ ಚೂಡಲಿಂಗೇಗೌಡ ರವರ ಜಮೀನು, ಪಶ್ಚಿಮಕ್ಕೆ ಸರ್ಕಾರಿ ಗೋಮಾಳ, ಉತ್ತರಕ್ಕೆ ಹೊನ್ನ ಮತ್ತು ವೀರಭದ್ರ ರವರ ಜಮೀನು ಮತ್ತು ದಕ್ಷಿಣಕ್ಕೆ ಮಾರೇಗೌಡ ರವರ ಮಗ ಚೂಡೇಗೌಡ ರವರ ಜಮೀನು ಬರುತ್ತದೆ ಎಂದು ನಮೂದಿಸಿರುತ್ತಾರೆ. ನಾನು ಈ ಮೇಲೆ ಹೇಳಿದ ಚಕ್ಕುಬಂದಿ ಸರ್ವೆ ನಂ.72/2ರ ಜಮೀನಿಗೆ ಸಂಬಂಧಿಸಿ ಚಕ್ಕುಬಂದಿ ಎಂದರೆ ಸರಿಯಲ್ಲ. ದಾವಾಸ್ವತ್ತು ಈಗ ವಾದಿಯ ಹೆಸರಿಗೆ ಬರುತ್ತಿದೆ. ಸುಮಾರು 80ವರ್ಷಗಳಿಂದ ದಾವಾಸ್ವತ್ತಿನ ಖಾತೆಯು ವಾದಿ ಮತ್ತು ವಾದಿಯ ಮಾವನಾದ ಕಾಡ ರವರ ಹೆಸರಿಗೆ ಬರುತ್ತಿದೆ ಎಂದರೆ ಸರಿ.

3. 1962ಕ್ಕೂ ಮೊದಲು ಸರ್ವೆ ನಂ.72/3ಕ್ಕೆ ಸಂಬಂಧಿಸಿದಂತೆ ಕ್ರಯವಾದ ಬಗ್ಗೆ ನನಗೆ ಮಾಹಿತಿ ಇಲ್ಲ. 1962ರಲ್ಲಿ ಯಾರು ಯಾರಿಗೆ ಜಮೀನು ಬರೆದುಕೊಟ್ಟರು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಶಿವಣ್ಣ ಉಃ ಚೂಡಲಿಂಗೇಗೌಡ ಎನ್ನುವವರು ಬಾಳೇಗೌಡ, ಭದ್ರಗಿರಿಗೌಡ ಮತ್ತು ವೀರಭದ್ರೇಗೌಡ ಎನ್ನುವವರಿಗೆ ಬರೆದುಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಕ್ರಯಪತ್ರದ ಆಧಾರದ ಮೇಲೆ ಬಾಳೇಗೌಡ, ಭದ್ರಗಿರಿಗೌಡ ಮತ್ತು ವೀರಭದ್ರೇಗೌಡ ರವರು ಸರ್ವೆ ನಂ.72/3ಕ್ಕೆ ಸಂಬಂಧಿಸಿದಂತೆ ಖಾತೆಯನ್ನು ತಮ್ಮ ಹೆಸರಿಗೆ ಮಾಡಿಸಿಕೊಂಡಿದ್ದಾರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಇಲ್ಲ, ಮಾಡಿಸಿಕೊಂಡಿಲ್ಲ ಎಂದು ನುಡಿಯುತ್ತಾರೆ.

4. ಸರ್ವೆ ನಂ.72ರಲ್ಲಿ ಒಟ್ಟು ಎಷ್ಟು ಪೋಡಿಗಳಾಗಿವೆ ಎನ್ನುವುದು ನನಗೆ ಗೊತ್ತಿಲ್ಲ. ಸಾಕ್ಷಿಗೆ ನಿಡಿ-2ನ್ನು ತೋರಿಸಿ ಅದರ ಪ್ರಕಾರ ಸರ್ವೆ ನಂ.72/3ರ ಜಮೀನು ಯಾರ ಹೆಸರಿಗೆ ಬರುತ್ತಿದೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ದಾಖಲೆಯನ್ನು ನೋಡಿ ಕಾಡ ಬಿನ್ ವೀರಭದ್ರೇಗೌಡ ಎನ್ನುವವರ ಹೆಸರಿಗೆ ಬರುತ್ತಿದೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ನಿಡಿ-2ನ್ನು ತೋರಿಸಿ ಅದರ ಪ್ರಕಾರ ಸರ್ವೆ ನಂ.72/2ರ ಜಮೀನು ಯಾರ ಹೆಸರಿಗೆ ಬರುತ್ತಿದೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ದಾಖಲೆಯನ್ನು ನೋಡಿ ಕಾಡ ಬಿನ್ ಕರಿಕುನ್ನ ಎನ್ನುವವರ ಹೆಸರಿಗೆ ಬರುತ್ತಿದೆ ಎಂದು ನುಡಿಯುತ್ತಾರೆ.

5. ಸಾಕ್ಷಿಗೆ ನಿಡಿ-13ನ್ನು ತೋರಿಸಿ ಅದರ ಪ್ರಕಾರ ಸದರಿ ಖರೀದಿ ಪತ್ರವನ್ನು ಕರಿಕುನ್ನ, ವೀರಭದ್ರೇಗೌಡ ರವರ ಮಗ ಮಾರೇಗೌಡ ರವರು ಬಾಳೇಗೌಡ ಮತ್ತು ಚೂಡೇಗೌಡ ಎನ್ನುವವರಿಗೆ ಬರೆದುಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ಅದನ್ನು ಯಾರು ಯಾರಿಗೆ ಬರೆದುಕೊಟ್ಟಿರುತ್ತಾರೆ ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ನಿಡಿ-13ನ್ನು ಕಾಡ ಬಿನ್ ವೀರಭದ್ರೇಗೌಡ ರವರು ಬರೆದುಕೊಟ್ಟಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಿಡಿ-13ರಡಿಯಲ್ಲಿ ಅವರು ಸರ್ವೆ ನಂ.72/2ರ ಜಮೀನು ಮಾರಾಟ ಮಾಡುವ ಬದಲು ತಪ್ಪಾಗಿ ಸರ್ವೆ ನಂ.72/3ರ ಜಮೀನನ್ನು ನಮೂದಿಸಿ ಮಾರಾಟ ಮಾಡಿರುತ್ತಾರೆ ಎಂದರೆ

ಸರಿಯಲ್ಲ. ನಿಡಿ-13ರಲ್ಲಿ ನಮೂದಿಸಿದ ಚಕ್ಕುಬಂದಿಯು ಸಹ ಸರ್ವೆ ನಂ.72/3ಕ್ಕೆ ಸಂಬಂಧಿಸಿದ್ದು ಅಲ್ಲ, ಅದು ಸರ್ವೆ ನಂ.72/2ರ ಜಮೀನಿಗೆ ಸಂಬಂಧಿಸಿದ ಚಕ್ಕುಬಂದಿ ಎಂದರೆ ಸರಿಯಲ್ಲ.

6. ನಿಡಿ-13ರಲ್ಲಿ ಸರ್ವೆ ನಂಬರ್ ಗಳಿಗೆ ಸಂಬಂಧಿಸಿದಂತೆ ಆದಂತಹ ತಪ್ಪನ್ನು ತಿದ್ದುಪಡಿ ಮಾಡಿಕೊಳ್ಳದೆ ಬಾಳೇಗೌಡ ಮತ್ತು ಚೂಡೇಗೌಡ ರವರು ಪ್ರತಿವಾದಿಯ ತಂದೆಗೆ ನಿಡಿ-14ರಂತೆ ಕ್ರಯಪತ್ರ ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಿಡಿ14ರಲ್ಲಿ ದೋಷ ಇರುವುದರಿಂದ ಅವರು ಆ ಪತ್ರದ ಆಧಾರದ ಮೇಲೆ ಸರ್ವೆ ನಂ.72/3ರ ಜಮೀನಿಗೆ ಸಂಬಂಧಿಸಿದಂತೆ ಖಾತೆಯನ್ನು ಇದುವರೆಗೂ ತಮ್ಮ ಹೆಸರಿಗೆ ಮಾಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ.

7. ಸರ್ವೆ ನಂ.72/2ರ ಖಾತೆಯು ಈಗ ಯಾರ ಹೆಸರಿನಲ್ಲಿದೆ ಎನ್ನುವುದು ನನಗೆ ಗೊತ್ತಿಲ್ಲ. ಸರ್ವೆ ನಂ.72/2ರ ಖಾತೆ ಪಹಣಿಯು ಈಗ ಪ್ರತಿವಾದಿಯ ತಂದೆಯ ಹೆಸರಿಗೆ ಬರುತ್ತಿದೆ ಎಂದರೆ ಸರಿ. ಸರ್ವೆ ನಂ.72/2ರ ಜಮೀನಿನ ಖಾತೆಯು ಅವರ ಹೆಸರಿಗೆ ಯಾವ ಆಧಾರದ ಮೇಲೆ ಬರುತ್ತಿದೆ ಎನ್ನುವುದು ನಿಮಗೆ ಗೊತ್ತಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಆ ಜಮೀನನ್ನು ಸಹ ಅವರು ಖರೀದಿಸಿದ್ದಾರೆ ಎಂದು ನನಗೆ ತಿಳಿಸಿರುತ್ತಾರೆ ಎಂದು ನುಡಿಯುತ್ತಾರೆ. ಸರ್ವೆ ನಂ.72/2ರ ಜಮೀನಿಗೆ ಸಂಬಂಧಿಸಿದಂತೆ ಇರುವ ಕ್ರಯಪತ್ರವನ್ನು ನಾನು

ನೋಡಿಲ್ಲ. ಸರ್ವೆ ನಂ.72/2ರ ಜಮೀನನ್ನು ಪ್ರತಿವಾದಿಯ ತಂದೆ ಖರೀದಿಸಿದ್ದ ಕಾರಣಕ್ಕೆ ಅವರು ಆ ಜಮೀನಿನ ಖಾತೆ ಮಾಡಿಸಿಕೊಂಡಿರುತ್ತಾರೆ, ಆದರೆ ಸರ್ವೆ ನಂ.72/3ರ ಜಮೀನನ್ನು ಪ್ರತಿವಾದಿಯ ತಂದೆ ಖರೀದಿಸದೆ ಇರುವ ಕಾರಣಕ್ಕಾಗಿಯೇ ಅದಕ್ಕೆ ಸಂಬಂಧಿಸಿದಂತೆ ಖಾತೆಯನ್ನು ಅವರು ತಮ್ಮ ಹೆಸರಿಗೆ ಮಾಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ.

8. ನಾನು ಮತ್ತು ಪ್ರತಿವಾದಿಗಳು ಅಣ್ಣತಮ್ಮಂದಿರುಗಳು ಹಾಗೂ ದಾಯಾದಿಗಳು ಎಂದರೆ ಸರಿ. ಸರ್ವೆ ನಂ.72/1ರ ಖಾತೆಯು ಈ ಹಿಂದೆ ಯಾರ ಹೆಸರಿನಲ್ಲಿತ್ತು ಎಂದು ನನಗೆ ಗೊತ್ತಿಲ್ಲ. ಈಗ ಸರ್ವೆ ನಂ.72/1ರ ಖಾತೆಯು ಯಾರ ಹೆಸರಿನಲ್ಲಿದೆ ಎಂದು ನನಗೆ ಗೊತ್ತಿಲ್ಲ. ನಿಡಿ-13ರಂತೆ ಇರುವ ದಾಖಲೆಯು ಆಗುವ ಕಾಲಕ್ಕೆ ನಾನು ಹುಟ್ಟಿರಲಿಲ್ಲ ಎಂದರೆ ಸರಿ. ನಾನು ನಿಡಿ-13ರ ಕಾಲಕ್ಕೆ ಹುಟ್ಟದೆ ಇರುವ ಕಾರಣಕ್ಕೆ ಆ ದಾಖಲೆಯ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿ.

9. ವಾದಿಯು ದಾವಾಸ್ವತ್ತಿನಲ್ಲಿ ಇವತ್ತಿಗೂ ಸಹ ಸ್ವಾಧೀನಾನುಭವದಲ್ಲಿರುತ್ತಾರೆ ಎಂದರೆ ಸರಿಯಲ್ಲ. ವಾದಿ ಮತ್ತು ನಮ್ಮಗಳ ನಡುವೆ ಸುಮಾರು 30ವರ್ಷಗಳಿಂದಲ್ಲೂ ಮನಸ್ತಾಪಗಳು ಇದ್ದು, ನಮ್ಮಗಳ ನಡುವೆ ಮಾತುಕತೆ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾಸ್ವತ್ತಿನ ಸ್ವಾಧೀನಾನುಭವದಿಂದ

ವಾದಿಯನ್ನು ಹೇಗಾದರೂ ಮಾಡಿ ಹೊರ ಹಾಕಬೇಕೆಂದು ಪ್ರತಿವಾದಿಯು ಪ್ರಯತ್ನ ಪಡುತ್ತಿದ್ದಾರೆ ಎಂದರೆ ಸರಿಯಲ್ಲ. ನನಗೆ ದಾವಾಸ್ವತ್ತಿನ ಮತ್ತು ದಾವೆಯ ಬಗ್ಗೆ ಮಾಹಿತಿ ಇಲ್ಲದೆ ಇದ್ದರೂ ಪ್ರತಿವಾದಿಗಳು ನನ್ನ ಸಂಬಂಧಿಕರಾದ ಕಾರಣಕ್ಕೆ ಅವರ ಪರವಾಗಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯವಿಚಾರಣ ಪ್ರಮಾಣ ಪತ್ರದ ಸಂಗತಿಗಳು ನನಗೆ ಗೊತ್ತು, ಅದನ್ನು ನಾನೇ ಹೇಳಿ ಬರೆಸಿರುತ್ತೇನೆ.

**ಮರುವಿಚಾರಣೆಃ- ಇಲ್ಲ.**

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

**ಓ ಹೇ ಕೇ ಸರಿ ಇದೆ,**

**(ರಾಧ.ಎಸ್)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಕನಕಪುರ.**